ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಂಡಸೀ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಒಟ್ಟು ಲಂಬಾಣಿ ತಾಂಡಗಳೆಷ್ಟು ಮತ್ತು ಯಾವ ಹೋಬಳಿಗೆ ಸೇರಿದೆ?

ಆ) ಅವುಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ವೆ ನಡೆದಿದೆಯೇ? (ನಡೆದಿದ್ದಲ್ಲಿ ಅದರ ಮಾಹಿತು ಒದಗಿಸುವುದು).

ಇ) ಅವುಗಳಲ್ಲಿ ಎಷ್ಟು ತಾಂಡಾಗಳಿಗೆ ಕನಿಷ್ಠ ಅವಶ್ಯಕತೆಗಳಾದ ಶಾಲೆ, ನೀರು, ವಿದ್ಯುಚ್ಛಕ್ತಿ ಮತ್ತು ರಸ್ತೆ ಸೌಕರ್ಯಗಳನ್ನು ಒದಗಿಸಲಾಗಿದೆ?

ಈ) ಆ ತಾಂಡಾಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಡಿಸಿಕೊಂಡಿದ್ದರೆ ಅದರ ಕಾರ್ಯಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೧೨. ಗಂಡಸೀ ಹೋಬಳಿ - ೨, ಜಾವಗಲ್ ಹೋಬಳಿ - ೧೦.

ಆ) ಹೌದು

ಇ) ಶಾಲಾ ಸೌಲಭ್ಯವನ್ನು ಹೊರತು ಪಡಿಸಿ ಉಳಿದೆಲ್ಲಾ ಸೌಕರ್ಯವನ್ನು ಮೇಲೆ ಹೇಳಿದ ಎಲ್ಲಾ ತಾಂಡಾಗಳಿಗೆ ಒದಗಿಸಿದೆ.

ಈ) ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಪರಿಶೀಲಿಸುತ್ತಿದೆ.

**ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಗ್ರಾಮಗಳಿಗೆ ಪಶುವೈದ್ಯಶಾಲೆ ಮಂಜೂರಾತಿ.**

೧೩೨೨(೨೦೦೫) ಶ್ರೀ ಡಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಎಳನಾಡು ಗ್ರಾಮ ಮತ್ತು ಶಿರು ತಾಲ್ಲೂಕಿನ ಮಾದೇನಹಳ್ಳಿ ನೇರಳೆಗುಡ್ಡ ಹಾಗೂ ಚಿಕ್ಕನ ಹಳ್ಳಿ ಗ್ರಾಮಗಳಿಗೆ ಮಶುವೈದ್ಯಶಾಲೆಯ ಮಂಜೂರಾತಿಗಾಗಿ ಅನೇಕ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರೀ ಗ್ರಾಮಗಳಲ್ಲಿ ಪಶುವೈದ್ಯ ಕೇಂದ್ರ ಅವಶ್ಯಕತೆಯ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ?

ಇ) ಪಶುವೈದ್ಯ ಶಾಲೆಗಳಿಲ್ಲದೇ ಆಲ್ಲಿಯ ರೈತರುಗಳು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸದರೀ ಗ್ರಾಮದಲ್ಲಿ ಮಶುವೈದ್ಯ ಶಾಲೆಗಳನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ಹಾಗೂ ಅದನ್ನು ಯಾವಾಗ ತೆರೆಯಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ, ಪಶುವೈದ್ಯ ಸಚಿವರು):-

ಅ) ಹೌದು

ಆ) ಹೌದು

ಇ) ಹೌದು

ಈ) ಶಿರಾ ತಾಲ್ಲೂಕಿನ ಲಕ್ಕನಹಳ್ಳಿಯಲ್ಲಿ ಈ ವರ್ಷ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಉಳಿದ ಸ್ಥಳಗಳ ಕುರಿತು ೧೯೯೨-೯೩ರಲ್ಲಿ ಅವಶ್ಯಕತೆ ನೋಡಿ ಆದ್ಯತೆ ಮೇಲೆ ಪರಿಗಣಿಸಲಾಗುವುದು.

**ಕುದರೆ ಕಣಿವೆ ಜಮೀನನ್ನು ಸಾಗುವಳಿದಾರರಿಗೆ ನೀಡುವುದು**

೧೩೨೩(೨೦೦೭)ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯೂರು ಹೋಬಳಿ, ತಮ್ಮಡಹಳ್ಳಿ ಗೊಲ್ಲರ ಹಟ್ಟಿ ನಿವಾಸಿಗಳು ಶ್ರೀರಾಂಪುರ ಹೋಬಳಿ (ಚಿತ್ರದುರ್ಗ ಜಿಲ್ಲೆ) ಕುದರೆ ಕಣಿವೆ ಸರ್ವೆ ನ. ೧ರಲ್ಲಿ ಕಳೆದ ೧೦ ವರ್ಷಗಳಿಂದ ೨೦೦ ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರುವುದು ನಿಜವೇ?

ಆ) ಸದರಿ ಜಮೀನಿನ ಮಾಲೀಕತ್ವಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬಗರ್ ಹುಕುಂ ರೀತ್ಯಾ ಪಟ್ಟಾ ನೀಡಲು ಅರ್ಜಿ ಸಲ್ಲಿಸಿದ್ದು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಇ) ಸಾಗುವಳಿ ಮಾಡುತ್ತಿರುವ ಜಮೀನನ್ನು ಅರಣ್ಯ ಇಲಾಖೆಯವರು ಅವರ ಇಲಾಖೆಗೆ ಸಂಬಂಧಿಸಿದ ಜಮೀನು ಎಂದು ಅಲ್ಲಿಯ ರೈತರಿಗೆ ಹೆದರಿಸಿ ಗುಂಡಿ ತೋಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ೧೦ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದ ರೈತರಿಗೆ ಅರಣ್ಯ ಇಲಾಖೆಯವರು ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ, ಸದರಿ ಜಮೀನನ್ನು ಸಾಗುವಳಿದಾರರಿಗೆ ನೀಡಲು ಸರಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಹೊಸದುರ್ಗ ತಾಲ್ಲೂಕು, ಕುದರೆ ಕಣಿವೆ ಗ್ರಾಮದ ಸರ್ವೆ ನ. ೧ರಲ್ಲಿ ೨೦೦ ಎಕರೆ ಜಮೀನನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು, ತಮ್ಮಡಿಹಳ್ಳಿ ಗೊಲ್ಲರಹಟ್ಟಿ ನಿವಾಸಿಗಳು ಕಳೆದ ೧೦ ವರ್ಷಗಳಿಂದ ಸಾಗುವಳಿ ಮಾಡುತ್ತಿರುವುದು ಸತ್ಯ ಸಂಗತಿಯಾಗಿರುವುದಿಲ್ಲ.

ಆ) ಚಿಕ್ಕನಾಯಕನ ಹಳ್ಳಿ ತಾಲ್ಲೂಕು, ತಮ್ಮಡಿಹಳ್ಳಿ ಗ್ರಾಮಸ್ಥರು ಅನಧಿಕೃತ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲು ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ ಮತ್ತು ಈ) ಹೊಸದುರ್ಗ ತಾಲ್ಲೂಕು, ಶ್ರೀರಾಂಪುರ ಹೋಬಳಿ, ಕುದರೆಕಣಿವೆ ಗ್ರಾಮದ ಸರ್ವೆ ನಂ. ೧ ರಲ್ಲಿನ ಭೂಮಿಯು ಕಾಯ್ದಿರಿಸಿದ ಅರಣ್ಯ ಪ್ರದೇಶವಾಗಿರುವುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಇಂತಹ ಅನಧಿಕೃತ ಸಾಗುವಳಿ ಮಾಡುವ ಪ್ರಯತ್ನವನ್ನು ತಡೆಯಲು